## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀಮತಿ ಆರ್ ಗಾಯಿತ್ರಿ, ಅಧ್ಯಕ್ಷರು ಮತ್ತು ಶ್ರೀ ಮುನಿರಾಜು ಹೆಚ್, ಸದಸ್ಯರು, ಕಗ್ಗಲೀಪುರ ಗ್ರಾಮ ಪಂಚಾಯಿತಿ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**

1. ಅಪರ ಪೊಲೀಸ್ ಮಹಾನಿರ್ದೇಶಕರು, ಭ್ರಷ್ಟಾಚಾರ ನಿಗ್ರಹದಳ, ಬೆಂಗಳೂರು ಇವರ ಪತ್ರ ಸಂಖ್ಯೆ: ಎಸಿಬಿ/ರಾಮನಗರ/ಮೊ.ಸಂ.06/2017, ದಿನಾಂಕ: 21.06.2017.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ, ಬೆಂಗಳೂರು ಇವರ ಪತ್ರ ಸಂಖ್ಯೆ: ಪರಿಷತ್/15/2017-18, ದಿನಾಂಕ: 03.07.2017.
3. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ/787/ಗ್ರಾಪಂಅ/2017. ದಿನಾಂಕ: 06.07.2017 ರ ಕಾರಣ ಕೇಳುವ ನೋಟೀಸು.
4. ಶ್ರೀಮತಿ ಆರ್ ಗಾಯಿತ್ರಿ, ಅಧ್ಯಕ್ಷರು ಮತ್ತು ಶ್ರೀ ಮುನಿರಾಜು ಹೆಚ್, ಸದಸ್ಯರು, ಕಗ್ಗಲೀಪುರ ಗ್ರಾಮ ಪಂಚಾಯಿತಿ ಇವರು ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ: 05.08.2017.
5. ವಿಚಾರಣೆಗೆ ಹಾಜರಾಗಲು ತಿಳುವಳಿಕೆ ಪತ್ರ ಸಂಖ್ಯೆ: ಗ್ರಾಅಪ/787/ಗ್ರಾಪಂಅ/2017, ದಿನಾಂಕ: 18.08.2017.
6. ದೂರುದಾರರಾದ ಶ್ರೀ ಪಿ. ನವೀನ್ ಬಿನ್ ಪುಟ್ಟರುದ್ರಯ್ಯ, ವಾಸ, ನಂ. ಕಗ್ಗಲೀಪುರ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ಇವರು ದಾಖಲೆಗಳೊಂದಿಗೆ ಸಲ್ಲಿಸಿದ ಮನವಿ ದಿನಾಂಕ: 24.08.2017.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಪತ್ರದಲ್ಲಿ ಅಪರ ಪೊಲೀಸ್ ಮಹಾನಿರ್ದೇಶಕರು, ಭ್ರಷ್ಟಾಚಾರ ನಿಗ್ರಹದಳ, ಬೆಂಗಳೂರು ಇವರು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಭ್ರಷ್ಟಾಚಾರ ನಿಗ್ರಹ ದಳ, ರಾಮನಗರ ಜಿಲ್ಲಾ ಪೊಲೀಸ್ ಠಾಣೆಗೆ ಫಿರ್ಯಾದುದಾರರಾದ ಶ್ರೀ ಪಿ. ನವೀನ್ ಬಿನ್ ಪುಟ್ಟರುದ್ರಯ್ಯ, 25 ವರ್ಷ, ವಾಸ ನಂ. ಕಗ್ಗಲೀಪುರ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ರವರು ನೀಡಿದ ದೂರಿನ ಸಾರಂಶವೇನೆಂದರೆ, ಫಿರ್ಯಾದುದಾರರ ತಂದೆ ಶ್ರೀ ಪುಟ್ಟರುದ್ರಯ್ಯ ರವರ ಹೆಸರಿನಲ್ಲಿರುವ ಕಗ್ಗಲೀಪುರ ಖಾತೆ ನಂಬರ್ 1381 ರಲ್ಲಿರುವ ನಿವೇಶನ, ತಾಯಿ ಶ್ರೀಮತಿ ಲಕ್ಷೀದೇವಮ್ಮ ರವರ ಹೆಸರಿನಲ್ಲಿರುವ ಖಾತೆ ನಂಬರ್ 293/7 ರಲ್ಲಿರುವ ಮನೆ ಮತ್ತು ಖಾತೆ ನಂಬರ್ 1226/16 ರಲ್ಲಿರುವ ವಾಣಿಜ್ಯ ಮಳಿಗೆಗಳ ಇ-ಖಾತೆ ಮಾಡಿಸಲು ಕಗ್ಗಲೀಪುರ ಗ್ರಾಮ ಪಂಚಾಯಿತಿ ಕಛೇರಿಗೆ ಫಿರ್ಯಾದುದಾರರು ದಿನಾಂಕ: 12.04.2017 ರಂದು ಅರ್ಜಿ ಸಲ್ಲಿಸಿದ್ದು, ಫಿರ್ಯಾದುದಾರರು ಅರ್ಜಿ ನೀಡಿ ಒಂದು ತಿಂಗಳು ಕಳೆದರೂ ಖಾತೆ ಮಾಡಿಕೊಡದಿದ್ದಾಗ ಫಿರ್ಯಾದುದಾರರು ಈ ಪ್ರಕರಣದ ಆರೋಪಿತ-1 ಶ್ರೀಮತಿ ಆರ್ ಗಾಯಿತ್ರಿ, ಅಧ್ಯಕ್ಷರು, ಕಗ್ಗಲೀಪುರ ಗ್ರಾಮ ಪಂಚಾಯಿತಿ, ಬೆಂಗಳೂರು ದಕ್ಷಿಣ ತಾಲ್ಲೂಕು ರವರನ್ನು ಮತ್ತು ಆರೋಪಿ-2 ಶ್ರೀ ಜಯರಾಮ್, ಸದರಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ಪತಿ (ಖಾಸಗಿ ವ್ಯಕ್ತಿ) ರವರುಗಳನ್ನು ಭೇಟಿ ಮಾಡಿ ಇ-ಖಾತೆ ಬಗ್ಗೆ ವಿಚಾರಿಸಿದಾಗ, ಇಬ್ಬರು ಆರೋಪಿತರು ಸ್ವಲ್ಪ ಸಮಯ ನೀಡುವಂತೆ, ದಾಖಲೆ ನೋಡಬೇಕೆಂದು ತಿಳಿಸಿರುತ್ತಾರೆ. ಫಿರ್ಯಾದುದಾರರಿಗೆ ಇದಾದ 3-4 ದಿನಗಳ ನಂತರ ಆರೋಪಿತ-3 ಶ್ರೀ ಮುನಿರಾಜು ಹೆಚ್, ಸದಸ್ಯರು, ಕಗ್ಗಲೀಪುರ ಗ್ರಾಮ ಪಂಚಾಯಿತಿ ರವರು ಪೋನ್ ಮಾಡಿ ಭೇಟಿ ಮಾಡುವಂತೆ ತಿಳಿಸಿದ್ದು, ನಂತರ ಆರೋಪಿತ -3 ಶ್ರೀ ಮುನಿರಾಜು ಹೆಚ್, ಸದಸ್ಯರು ಮತ್ತು ಆರೋಪಿತ-4 ಶ್ರೀ ನಟರಾಜು, ಸದಸ್ಯರು, ಕಗ್ಗಲೀಪುರ ಗ್ರಾಮ

2..

ಪಂಚಾಯಿತಿ ರವರ ಜೊತೆ ಫಿರ್ಯಾದುದಾರರನ್ನು ಭೇಟಿ ಮಾಡಿ, ಗ್ರಾಮ ಪಂಚಾಯಿತಿ ಅಧ್ಯಕ್ಷರು ತಮ್ಮ ಬಳಿ ಮಾತನಾಡುವಂತೆ ತಿಳಿಸಿರುವುದಾಗಿ ಫಿರ್ಯಾದುದಾರರಿಗೆ ಹೇಳಿ ಸದರಿ ಮೂರು ಸ್ವತ್ತುಗಳಿಗೆ ಇ-ಖಾತಾ ಮಾಡಿಸಲು ಸರ್ಕಾರಿ ಫೀಜ್ ರೂ. 1,94,000/-ಗಳ ಹಣವನ್ನು ಕಟ್ಟುವಂತೆ ಹಾಗೂ ರೂ. 1,50,000/-ಗಳ ಹಣವನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷರು, ಪಿಡಿಓ ಮತ್ತು ಕಾರ್ಯದರ್ಶಿ ರವರಿಗೆ ಲಂಚವಾಗಿ ಕೊಡುವಂತೆ ಬೇಡಿಕೆ ಇಟ್ಟಿರುತ್ತಾರೆ. ಈ ಸಂಬಂಧ ಫಿರ್ಯಾದುದಾರರು ಆರೋಪಿ-2 ಶ್ರೀ ಜಯರಾಮ್ ರವರನ್ನು ಭೇಟಿ ಮಾಡಿ ವಿಚಾರಿಸಿದಾಗ ಸದರಿ ರವರು ಸಹ ಆರೋಪಿ-3 ಶ್ರೀ ಮುನಿರಾಜು ಹೆಚ್ ರವರು ಹೇಳಿದಂತೆ ಹಣ ನೀಡಲು ತಿಳಿಸಿರುತ್ತಾರೆ. ನಂತರ ಆರೋಪಿ-2 ಶ್ರೀ ಜಯರಾಮ್ ರವರು ಫಿರ್ಯಾದುದಾರರಿಗೆ ಪದೇ ಪದೇ ಪೋನ್ ಮಾಡಿ ಹಣ ನೀಡುವಂತೆ ಒತ್ತಾಯಿಸುತ್ತಿದ್ದು, ದಿನಾಂಕ:01.06.2017 ರಂದು ಫಿರ್ಯಾದುದಾರರಿಗೆ ಸೇರಿದ ಶಾಂತಲಾ ಫೋಟೋ ಸ್ಟುಡಿಯೊ ಹತ್ತಿ ಆರೋಪಿ-2 ರವರನ್ನು ಕರೆಯಿಸಿಕೊಂಡು ಮುಂಗಡವಾಗಿ ರೂ. 50,000/-ಗಳ ಲಂಚದ ಹಣವನ್ನು ಕೊಟ್ಟಿರುತ್ತಾರೆ. ನಂತರ ಬಾಕಿ ಉಳಿದ ಹಣಕ್ಕೆ ಆರೋಪಿ-2 ಶ್ರೀ ಜಯರಾಮ್ ಮತ್ತು ಆರೋಪಿ-3 ಶ್ರೀ ಮುನಿರಾಜು ಹೆಚ್ ರವರುಗಳು ಫೋನ್ ಮಾಡಿ ಒತ್ತಾಯಿಸುತ್ತಿದ್ದು, ಫಿರ್ಯಾದುದಾರರು ದಿನಾಂಕ: 06.06.2017 ರಂದು ಆರೋಪಿ-1 ಶ್ರೀಮತಿ ಗಾಯಿತ್ರಿ ರವರನ್ನು ಭೇಟಿ ಮಾಡಿ ಅವರ ಸಮ್ಮುಖದಲ್ಲಿ ಆರೋಪಿ-1 ರ ತಮ್ಮನಾದ ಆರೋಪಿತ-5 ಶ್ರೀ ಶಿವರಾಜು ರವರಿಗೆ ರೂ. 50,000/-ಗಳ ಲಂಚದ ಹಣವನ್ನು ಕೊಟ್ಟಿರುತ್ತಾರೆ. ಆದರೂ ಆರೋಪಿತ-1 ರವರು ಬಾಕಿ ಉಳಿದ ರೂ. 50,000/-ಗಳ ಲಂಚದ ಹಣ ನೀಡುವಂತೆ ಒತ್ತಾಯಿಸುತ್ತಿರುತ್ತಾರೆ. ಫಿರ್ಯಾದುದಾರರು ಮತ್ತಷ್ಟು ಲಂಚದ ಹಣ ನೀಡಿ ಕೆಲಸ ಮಾಡಿಸಿಕೊಳ್ಳಲು ಇಷ್ಟವಿಲ್ಲದ ಕಾರಣ ಮೇಲೆ ತಿಳಿಸಿದ ಆರೋಪಿಗಳ ವಿರುದ್ಧ ಸ್ಥಳೀಯ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆ; ರಾಮನಗರ ಜಿಲ್ಲೆಗೆ ಭೇಟಿ ನೀಡಿ, ದೂರು ನೀಡಿದ್ದು, ಪೊಲೀಸ್ ಉಪಾಧೀಕ್ಷಕ ರವರು ದೂರು ಸ್ವೀಕರಿಸಿ ಮೇಲ್ಕಂಡ ಉಲ್ಲೇಖದಂತೆ ಪ್ರಕರಣ ದಾಖಲಿಸಿಕೊಂಡು, ಫಿರ್ಯಾದುದಾರರು ನೀಡಿದ ದಾಖಲೆಗಳನ್ನು ಪರಿಶೀಲಿಸಿದ ನಂತರ ಎಸಿಬಿ ಪೊಲೀಸ್‌ರು ದಿನಾಂಕ:08.06.2017 ರಂದು ಫಿರ್ಯಾದುದಾರರೊಂದಿಗೆ ಓ.ಬಿ. ಚೌಡಹಳ್ಳಿ ಗ್ರಾಮದ ಬಳಿ ವಾಸವಿರುವ ಆರೋಪಿ-1 ಮತ್ತು 2 ರವರುಗಳ ವಾಸದ ಮನೆಗೆ ಹೋಗಿದ್ದು, ಫಿರ್ಯಾದುದಾರರಿಂದ ಬಾಕಿ ಉಳಿದಿದ್ದ ರೂ. 50,000/-ಗಳ ಲಂಚದ ಹಣವನ್ನು ಸದರಿ ಆರೋಪಿತರುಗಳು ಪಡೆದುಕೊಂಡ ನಂತರ ಎಸಿಬಿ ಪೊಲೀಸ್‌ರ ಟ್ರಾಪ್ ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದಿದ್ದು, ಈ ಬಗ್ಗೆ ತನಿಖೆ ಕೈಗೊಳ್ಳಲಾಗಿರುತ್ತದೆ ಎಂದು ಅಪರ ಪೊಲೀಸ್ ಮಹಾನಿರ್ದೇಶಕರು, ಭ್ರಷ್ಟಾಚಾರ ನಿಗ್ರಹ ದಳ ಇವರು ತಿಳಿಸಿರುತ್ತಾರೆ.

ಈ ಪ್ರಕರಣದಲ್ಲಿ ಆರೋಪಿತ-1 ಶ್ರೀಮತಿ ಆರ್ ಗಾಯಿತ್ರಿ ಕೋಂ ವಿ ಜಯರಾಮ್, 30 ವರ್ಷ ಅಧ್ಯಕ್ಷರು, ಕಗ್ಗಲೀಪುರ ಗ್ರಾಮ ಪಂಚಾಯಿತಿ, ಆರೋಪಿತ-2 ಶ್ರೀ ವಿ. ಜಯರಾಮ್ ಬಿನ್ ಲೇಟ್ ವೆಂಕಟಪ್ಪ, 42 ವರ್ಷ (ಖಾಸಗಿ ವ್ಯಕ್ತಿ), ಆರೋಪಿತ-3 ಶ್ರೀ ಮುನಿರಾಜು ಹೆಚ್, ಸದಸ್ಯರು, ಕಗ್ಗಲೀಪುರ ಗ್ರಾಮ ಪಂಚಾಯಿತಿ ಹಾಗೂ ಆರೋಪಿತ-5 ಶ್ರೀ ಶಿವರಾಜು ಆರ್ ಬಿನ್ ಲೇಟ್ ರೇವಣ್ಣ, 29 ವರ್ಷ (ಖಾಸಗಿ ವ್ಯಕ್ತಿ) ರವರುಗಳನ್ನು ದಿನಾಂಕ: 08.06.2017 ರಂದು ದಸ್ತಗಿರಿ ಮಾಡಿ, ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ ಜಿಲ್ಲೆ ಇಲ್ಲಿಗೆ ಆರೋಪಿತರುಗಳನ್ನು ಹಾಜರುಪಡಿಸಿದ್ದು, ಮಾನ್ಯ ನ್ಯಾಯಾಲಯವು ಆರೋಪಿತರನ್ನು ನ್ಯಾಯಾಂಗ ಬಂಧನದಲ್ಲಿರಿಸಿ ಆದೇಶಿಸಿದ್ದು, ದಿನಾಂಕ:16.06.2017 ರಂದು ಜಾಮೀನಿನ ಮೇಲೆ ಬಿಡುಗಡೆಗೊಂಡಿರುತ್ತಾರೆಂದು, ಸದರಿ ಆರೋಪಿತ-1 ಶ್ರೀಮತಿ ಆರ್ ಗಾಯಿತ್ರಿ ಮತ್ತು ಆರೋಪಿತ-3 ಶ್ರೀ ಮುನಿರಾಜು ಹೆಚ್ ರವರುಗಳು ಚುನಾಯಿತ ಗ್ರಾಮ ಪಂಚಾಯಿತಿ ಸದಸ್ಯರುಗಳಾಗಿದ್ದು, ಇವರುಗಳನ್ನು ಹಾಲಿ ಸದಸ್ಯತ್ವ ಸ್ಥಾನದಲ್ಲಿಯೇ ಮುಂದುವರೆಸಿದ್ದೇ ಆದಲ್ಲಿ, ಸದರಿಯವರು ಈ ಪ್ರಕರಣದ ತನಿಖೆಗೆ ಅವಶ್ಯವಿರುವ ದಾಖಲಾತಿಗಳನ್ನು ನಾಶಪಡಿಸುವ ಅಥವಾ ತಿರುಚುವ ಸಾಧ್ಯತೆಗಳಿರುತ್ತವೆ ಹಾಗೂ ಇತರೆ ಸಾಕ್ಷಿದಾರರಿಗೆ ತನ್ನ ಹುದ್ದೆಯ ಪ್ರಭಾವವನ್ನು ಬಳಸಿಕೊಂಡು ಬೆದರಿಕೆ ಒಡ್ಡುವ ಸಾಧ್ಯತೆಗಳಿರುತ್ತವೆಂದು ತಿಳಿಸುತ್ತಾ ಸದರಿಯವರ ಸದಸ್ಯತ್ವವನ್ನು ರದ್ದುಗೊಳಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಈ ಸಂಬಂಧ ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯಿತಿ ಇವರು ಸಲ್ಲಿಸಿರುವ ವರದಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಇವರು ಸರ್ಕಾರಕ್ಕೆ ಕಳುಹಿಸುತ್ತ ಆರೋಪಿತರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರಂತೆ ಕ್ರಮ ಜರುಗಿಸಲು ಸರ್ಕಾರವನ್ನು ಕೋರಿರುತ್ತಾರೆ.

ಮೇಲ್ಕಂಡ ವರದಿಯ ಅನುಸಾರ ಶ್ರೀಮತಿ ಆರ್ ಗಾಯಿತ್ರಿ, ಅಧ್ಯಕ್ಷರು ಮತ್ತು ಶ್ರೀ ಮುನಿರಾಜು ಹೆಚ್, ಸದಸ್ಯರು, ಕಗ್ಗಲೀಪುರ ಗ್ರಾಮ ಪಂಚಾಯಿತಿ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ಇವರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993ರ ಪ್ರಕರಣ 43-ಎ ಅಡಿಯಲ್ಲಿ ಕ್ರಮ ವಹಿಸುವ ಪೂರ್ವದಲ್ಲಿ ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಪತ್ರದಲ್ಲಿ ನಿಯಮಾನುಸಾರ ಕಾರಣ ಕೇಳುವ ನೋಟೀಸು ಜಾರಿ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(4) ರಲ್ಲಿ ಸದರಿಯವರು ತಮ್ಮ ಲಿಖಿತ ಹೇಳಿಕೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಶ್ರೀಮತಿ ಆರ್ ಗಾಯಿತ್ರಿ ರವರು ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡಂತೆ ಸಲ್ಲಿಸಿರುತ್ತಾರೆ.

- ಫಿರ್ಯಾದುದಾರರಾದ ಶ್ರೀ ಪಿ ನವೀನ್ ಇವರ ತಂದೆ ಹಾಗೂ ತಾಯಿಯವರ ಹೆಸರಿನಲ್ಲಿ ವಾಣಿಜ್ಯ ಮಳಿಗೆಗಳು ಇರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಮತ್ತು ಸದರಿ ಆಸ್ತಿಗಳ ಬಗ್ಗೆ ಇ-ಖಾತಾ ಮಾಡಿಸಲು ದಿನಾಂಕ:12.04.2017 ರಂದು ಕಗ್ಗಲೀಪುರ ಗ್ರಾಮ ಪಂಚಾಯಿತಿ ಕಛೇರಿಗೆ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ.
- ನಿಯಮಾನುಸಾರ ಅವಶ್ಯವಿರುವ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿದ್ದಲ್ಲಿ ದಾಖಲೆಗಳನ್ನು ಪಿ.ಡಿ.ಓ ಮತ್ತು ಕಾರ್ಯದರ್ಶಿಗಳು ಸ್ಥಳ ಪರಿಶೀಲನೆ ಮಾಡಿ ನಂತರ ಗ್ರಾಮ ಪಂಚಾಯಿತಿ ಸಭೆಯ ಕಮಿಟಿ ಮೀಟಿಂಗ್‌ನಲ್ಲಿ ನಿರ್ಧರಿಸಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ. ಆದರೆ ಫಿರ್ಯಾದುದಾರರು ಹೇಳಿರುವಂತೆ ಅವರು ನಾನು ಮತ್ತು ನನ್ನ ಪತಿ ಶ್ರೀ ಜಯರಾಮ್ ರವರನ್ನು ಭೇಟಿಯಾಗಿ ಇ-ಖಾತಾ ಬಗ್ಗೆ ವಿಚಾರಿಸಿರುವುದಿಲ್ಲ ಹಾಗೂ ನಾವಿಬ್ಬರೂ ಸಮಯ ಬೇಕೆಂದು ಹೇಳಿರುವುದಿಲ್ಲ.
- ಗ್ರಾಮ ಪಂಚಾಯಿತಿ ಸದಸ್ಯರಾದ ಶ್ರೀ ಮುನಿರಾಜು ಹೆಚ್ ರವರು ಗ್ರಾಮ ಪಂಚಾಯಿತಿಯ ಅಧ್ಯಕ್ಷರು, ಪಿ.ಡಿ.ಓ ಮತ್ತು ಕಾರ್ಯದರ್ಶಿಯವರಿಗೆ ರೂ.1,50,000/- ಹಣ ಕೊಡಬೇಕೆಂದು ಹೇಳಿರುವ ವಿಷಯ ನನ್ನ ಗಮನಕ್ಕೆ ಬಂದಿರುವುದಿಲ್ಲ.
- ನನ್ನ ಪತಿ ಶ್ರೀ ಜಯರಾಮ್ ರವರು ಕಗ್ಗಲೀಪುರ ಗ್ರಾಮ ಪಂಚಾಯಿತಿಯ ವ್ಯವಹಾರಗಳಲ್ಲಿ ತಲೆ ಹಾಕುವುದಿಲ್ಲ. ಆದುದರಿಂದ ಅವರು ಫಿರ್ಯಾದುದಾರರಿಗೆ ಪದೇ ಪದೇ ಪೋನ್ ಮಾಡಿ ಹಣ ನಿಡುವಂತೆ ಒತ್ತಾಯಿಸಿದ್ದರು ಎಂಬ ಆರೋಪ ಶುದ್ಧ ಸುಳ್ಳಿನಿಂದ ಕೂಡಿರುತ್ತದೆ ಮತ್ತು ಅವರಿಗೆ ದಿನಾಂಕ:01.06.2017 ರಂದು ರೂ.50,000/-ಗಳ ಮುಂಗಡ ಹಣ ನೀಡಲಾಗಿದೆ ಎಂಬುದು ಸಹ ಸುಳ್ಳಿನಿಂದ ಕೂಡಿರುತ್ತದೆ.
- ದಿನಾಂಕ:06.06.2017 ರಂದು ನನ್ನ ಸಮ್ಮುಖದಲ್ಲಿ ನನ್ನ ತಮ್ಮನಾದ ಶ್ರೀ ಶಿವರಾಜು ರವರಿಗೆ ರೂ.50,000/-ಗಳ ಕೊಟ್ಟಿರುತ್ತಾರೆಂಬುದು ಶುದ್ಧ ಸುಳ್ಳಾಗಿರುತ್ತದೆ ಮತ್ತು ಬಾಕಿ ಉಳಿದಿರುವ ರೂ.50,000/-ಗಳ ಹಣವನ್ನು ನೀಡುವಂತೆ ಒತ್ತಾಯಿಸಿರುವುದಾಗಿ ಹೇಳಿರುವುದು ಶುದ್ಧ ಸುಳ್ಳಾಗಿರುತ್ತದೆ.
- ನನ್ನ ಪತಿ ಜಯರಾಮ್ ಮತ್ತು ಫಿರ್ಯಾದುದಾರರಾದ ನವೀನ್ ಪಿ ರವರು ಜೊತೆಗೂಡಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದು, ಕಮೀಷನ್ ಹಣವನ್ನು ಇಬ್ಬರೂ ಹಂಚಿಕೊಳ್ಳುವುದು ಸರ್ವೇ ಸಾಮಾನ್ಯವಾಗಿರುತ್ತದೆ. ದಿನಾಂಕ:08.06.2017 ರಂದು ಬೆಳಗ್ಗೆ ಶ್ರೀ ನವೀನ್ ಪಿ ರವರು ನಮ್ಮ ಮನೆಗೆ ಬಂದು ನನ್ನ ಪತಿಗೆ ಕಮಿಷನ್ ಹಣ ಕೊಡಬೇಕಾಗಿದೆ ಎಂದು ಹೇಳಿದಾಗ ಹಣವನ್ನು ಮನೆಯಲ್ಲಿ ಟೇಬಲ್ ಮೇಲೆ ಇಡಿ ಎಂದು ಹೇಳಿದ, ಆದರಂತೆ ಅವರು ಹಣವನ್ನು ಟೇಬಲ್ ಮೇಲೆ ಇಟ್ಟು ಹೊರಗಡೆ ಹೋದ ಕೂಡಲೆ ಎ.ಸಿ.ಬಿ ಪೋಲೀಸರು ಬಂದು ಟೇಬಲ್

ಮೇಲೆ ಇಟ್ಟಿದ ಹಣವನ್ನು ತೆಗೆದುಕೊಡಿ ಎಂದು ಕೇಳಿದರು. ಆಗ ನಾನು ಅದನ್ನು ಅವರಿಗೆ ತೆಗೆದುಕೊಟ್ಟೆ, ನಂತರ ಹಣವನ್ನು ಎಣಿಸಿಕೊಟ್ಟಾಗ ನನ್ನ ಕೈಯನ್ನು ತೊಳೆಸಿದ್ದರು ಹಾಗೂ ಕೆಲವು ಖಾಲಿ ಕಾಗದದ ಮೇಲೆ ನನ್ನ ಮತ್ತು ನನ್ನ ಗಂಡನ ಸಹಿಯನ್ನು ಸಹಾ ಎ.ಸಿ.ಬಿ ಪೊಲೀಸರು ಬರೆಸಿಕೊಂಡರು.

- ನಾನು ಪರಿಶಿಷ್ಟ ಜಾತಿ ಜನಾಂಗಕ್ಕೆ ಸೇರಿದವಳಾಗಿರುತ್ತೇನೆ. ಶ್ರೀ ಕೆ ಎಸ್ ಪರ್ವಿಜ್ ಅಹ್ಮದ್, ಜಿಲ್ಲಾ ಪಂಚಾಯತ್ ಸದಸ್ಯರು ಹಾಗೂ ಶ್ರೀ ಮಹದೇವಯ್ಯ, ತಾಲ್ಲೂಕು ಪಂಚಾಯತಿ ಸದಸ್ಯರು ಶ್ರೀ ನವೀನ್ ಪಿ ರವರನ್ನು ಹುರಿದುಂಬಿಸಿ ಈ ಕೃತ್ಯವನ್ನು ಎಸಗಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ನನ್ನ ವಿರುದ್ಧ ಯಾವುದೇ ಕಾನೂನಿನ ಕ್ರಮ ಕೈಗೊಳ್ಳದಿರುವಂತೆ ಅವರು ವಿನಂತಿಸಿರುತ್ತಾರೆ.

ಶ್ರೀ ಮುನಿರಾಜು ಹೆಚ್, ಸದಸ್ಯರು, ಕಗ್ಗಲೀಪುರ ಗ್ರಾಮ ಪಂಚಾಯಿತಿ ಇವರು ಸಲ್ಲಿಸಿರುವ ಹೇಳಿಕೆಯಲ್ಲಿಯೂ ಸಹ ಫಿರ್ಯಾದುದಾರರು ದಿನಾಂಕ:12.04.2017 ರಂದು ಕಗ್ಗಲೀಪುರ ಗ್ರಾಮ ಪಂಚಾಯಿತಿಗೆ ಇ–ಖಾತಾ ಮಾಡುವ ಸಲುವಾಗಿ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ, ಅವರು ತನಗೆ ತುಂಬ ಆತ್ಮೀಯರಾಗಿರುತ್ತಾರೆ. ಅವರ ಸ್ವತ್ತುಗಳಿಗೆ ಇ–ಖಾತಾ ಮಾಡಿಸಲು ಪಂಚಾಯಿತಿ ಅಧ್ಯಕ್ಷರು ಮತ್ತು ಪಿ.ಡಿ.ಓ ಮತ್ತು ಕಾರ್ಯದರ್ಶಿಯವರಿಗೆ ರೂ.1,50,000/–ಗಳ ಲಂಚದ ಹಣ ನೀಡಬೇಕೆಂಬ ತನ್ನ ಗಮನಕ್ಕೆ ಬಂದಿರುವುದಿಲ್ಲ, ದಿನಾಂಕ:01.06.2017 ರಂದು ತನ್ನ ಮೂಲಕ ಮುಂಗಡವಾಗಿ ರೂ.50,000/–ಗಳ ಲಂಚದ ಹಣ ನೀಡಿರುತ್ತಾರೆಂಬುದು ಶುದ್ಧ ಸುಳ್ಳಾಗಿರುತ್ತದೆ. ಜಿಲ್ಲಾ ಪಂಚಾಯಿತಿ ಸದಸ್ಯರಾದ ಶ್ರೀ ಕೆ ಎಸ್ ಪರ್ವೀಜ್ ಅಹಮದ್ ಮತ್ತು ತಾಲ್ಲೂಕು ಪಂಚಾಯಿತಿ ಸದಸ್ಯರಾದ ಶ್ರೀ ಮಹಾದೇವಯ್ಯ ಇವರಿಬ್ಬರಿಗೂ ಕಗ್ಗಲಿಪುರ ಗ್ರಾಮ ಪಂಚಾಯಿತಿಯಲ್ಲಿ ಸದಸ್ಯರು ಕಡಿಮೆ ಇರುವ ಕಾರಣ ತಾನು ಪರಿಶಿಷ್ಟ ಜಾತಿಗೆ ಸೇರಿದವನಾಗಿದ್ದು, ತನ್ನ ಸದಸ್ಯತ್ವ 5 ವರ್ಷ ಪೂರ್ಣಗೊಳ್ಳದಂತೆ ಮಾಡಬೇಕೆಂಬ ಉದ್ದೇಶದಿಂದ ಶ್ರೀ ನವೀನ್ ಪಿ ರವರನ್ನು ಹುರಿದುಂಬಿಸಿ ಈ ಕೃತ್ಯ ಎಸಗಿಸಿರುತ್ತಾರೆಂದು ಸಲ್ಲಿಸುತ್ತಾ, ಈ ಹಿನ್ನೆಲೆಯಲ್ಲಿ ತನ್ನ ವಿರುದ್ಧ ಯಾವುದೇ ಕಾನೂನು ಕ್ರಮ ಕೈಗೊಳ್ಳದಿರುವಂತೆ ವಿನಂತಿಸಿರುತ್ತಾರೆ.

ಈ ಪ್ರಕರಣದ ವಿಚಾರಣೆಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ನ್ಯಾಯಾಲಯದಲ್ಲಿ ದಿನಾಂಕ:22.08.2017 ರಂದು ನಡೆಸಲಾಗಿದೆ. ಈ ಸಂದರ್ಭದಲ್ಲಿ ಆಪಾದಿತ ಅಧ್ಯಕ್ಷರು ಮತ್ತು ಸದಸ್ಯರು ಸದರಿ ವಿಚಾರಣೆಯಲ್ಲಿ ಹಾಜರಿದ್ದು, ತಮ್ಮ ಹೇಳಿಕೆ ಸಲ್ಲಿಸಿರುತ್ತಾರೆ. ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸಹ ಹಾಜರಿದ್ದು ಅವರ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

ಇದಲ್ಲದೆ ಫಿರ್ಯಾದುದಾರರು ಮೇಲೆ ಕ್ರಮ ಸಂಖ್ಯೆ (6) ರಲ್ಲಿ ಓದಲಾದ ತಮ್ಮ ಮನವಿಯ ಸಂಗಡ ದಾಖಲೆಗಳು ಹಾಗೂ ಸಿಡಿಗಳನ್ನು ಸಲ್ಲಿಸಿರುತ್ತಾರೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ನ್ಯಾಯಾಲಯದ ವಿಚಾರಣೆಯ ಸಂದರ್ಭದಲ್ಲಿ ಆಪಾದಿತರು ಸಲ್ಲಿಸಿದ ಹೇಳಿಕೆಗಳನ್ನು ಮತ್ತು ಲಭ್ಯವಿದ್ದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿದೆ ಹಾಗೂ ಲಂಚದ ಹಣಕ್ಕೆ ಒತ್ತಾಯ ಮಾಡಿ ಅದನ್ನು ಆಗಿಂದಾಗ್ಗೆ ಸ್ವೀಕರಿಸಿರುವುದಕ್ಕೆ ಸಂಬಂಧಿಸಿದಂತೆ ಫಿರ್ಯಾದುದಾರರು ಒದಗಿಸಿರುವ ಸಿಡಿಯಲ್ಲಿನ ದೃಶ್ಯಾವಳಿಗಳನ್ನು ಸಹ ವೀಕ್ಷಿಸಿ ಪರಿಶೀಲಿಸಲಾಗಿದೆ. ಸದರಿ ಸಿಡಿಯಲ್ಲಿನ ದೃಶ್ಯಾವಳಿಗಳ ಅನುಸಾರ ಮೇಲ್ಕಂಡ ಆರೋಪಿಗಳು ಲಂಚದ ಹಣ ಸ್ವೀಕರಿಸಿರುವುದು ದೃಢಪಟ್ಟಿರುತ್ತದೆ. ಈ ಹಿನ್ನೆಲೆಯಲ್ಲಿ ಶ್ರೀಮತಿ ಆರ್ ಗಾಯಿತ್ರಿ, ಅಧ್ಯಕ್ಷರು ಮತ್ತು ಶ್ರೀ ಮುನಿರಾಜು ಹೆಚ್, ಸದಸ್ಯರು, ಕಗ್ಗಲೀಪುರ ಗ್ರಾಮ ಪಂಚಾಯಿತಿ ಇವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43(ಎ) ರನ್ವಯ ಕಗ್ಗಲೀಪುರ ಗ್ರಾಮ ಪಂಚಾಯಿತಿಯ ಸದಸ್ಯತ್ವದಿಂದ ತೆಗೆದು ಹಾಕಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಕೆಳಕಂಡ ಆದೇಶ

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/787/ಗ್ರಾಪಂಅ/2017 ಬೆಂಗಳೂರು, ದಿನಾಂಕ:29-11-2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ಆರ್ ಗಾಯಿತ್ರಿ, ಅಧ್ಯಕ್ಷರು ಮತ್ತು ಶ್ರೀ ಮುನಿರಾಜು ಹೆಚ್, ಸದಸ್ಯರು, ಕಗ್ಗಲೀಪುರ ಗ್ರಾಮ ಪಂಚಾಯಿತಿ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43(ಎ) ರನ್ವಯ ಕಗ್ಗಲೀಪುರ ಗ್ರಾಮ ಪಂಚಾಯಿತಿಯ ಸದಸ್ಯತ್ವದಿಂದ ತೆಗೆದು ಹಾಕಿ ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದೆ.

ಮುಂದುವರೆದು ಶ್ರೀಮತಿ ಆರ್ ಗಾಯಿತ್ರಿ, ಅಧ್ಯಕ್ಷರು, ಕಗ್ಗಲೀಪುರ ಗ್ರಾಮ ಪಂಚಾಯಿತಿ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರ ಪತಿ ಶ್ರೀ ಪಿ ಜಯರಾಮ್ ಇವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಅಪರ ಪೊಲೀಸ್ ಮಹಾನಿರ್ದೇಶಕರು, ಭ್ರಷ್ಟಾಚಾರ ನಿಗ್ರಹದಳ, ಬೆಂಗಳೂರು.
2. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಜಿಲ್ಲೆ.
4. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.
5. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕಗ್ಗಲೀಪುರ ಗ್ರಾಮ ಪಂಚಾಯಿತಿ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.
6. ಶ್ರೀಮತಿ ಆರ್ ಗಾಯಿತ್ರಿ, ಅಧ್ಯಕ್ಷರು, ಕಗ್ಗಲೀಪುರ ಗ್ರಾಮ ಪಂಚಾಯಿತಿ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.
7. ಶ್ರೀ ಮುನಿರಾಜು ಹೆಚ್, ಸದಸ್ಯರು, ಕಗ್ಗಲೀಪುರ ಗ್ರಾಮ ಪಂಚಾಯಿತಿ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.
8. ಗಣಕ ಕೋಶ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.